

ಮನೋಸ್ಥಿತಿಗೆ, ಅನುಕೂಲಕ್ಕೆ, ಸ್ವಾರ್ಥಕ್ಕೆ ತಕ್ಕಂತೆ ಬದಲಾಗುವ ಸಂದರ್ಭಗಳ ಸ್ವರೂಪ ನೋಡಿ ನಾಗರಾಜ ಅಚ್ಚರಿಗೊಂಡಿದ್ದ.

★★★

ಬಂದಿದ್ದಳು ಅಮೃತಾ, ಸೀತೆ ಎರಡನೇ ಬಾಣಂತನ ಮುಗಿಸಿಕೊಂಡು ಮೂರನೇ ತಿಂಗಳಲ್ಲಿ ತೌರಿನಿಂದ ಹಿಂದಿರುಗಿ ಬಂದ ಕೆಲವೇ ದಿನಗಳಲ್ಲಿ.

“ಮತ್ತೊಂದೂ ಗಂಡೇ ಆಯ್ತು ಕಣೇ. ಹುಡುಗಿ ಆಗಿದ್ದಿದ್ರೆ ಲಾಯ್ಖಿರ್ತಿತ್ತು. ಇವಳು ಬಂದ್ಮೇಲೆ ಬಾ. ನಿನ್ನನ್ನ ನೋಡ್ದೆ ಸುಮಾರು ದಿನ ಆಯ್ತು” ಇವನು ಫೋನಿನಲ್ಲಿ ವಸಗೆ ತಲುಪಿಸಿದ್ದ.

“ಹೋ...” ಅಂದಿದ್ದಳು ಅಮೃತಾ. ಆಗ ಗೊತ್ತಾಗಿರಲಿಲ್ಲ ಅದರ ಅರ್ಥ. ಬಂದಿದ್ದು ಒಬ್ಬಳೇ. ಚಿಕ್ಕಿ, ಚಿಕ್ಕಪ್ಪ ಜೊತೆಗಿರಲಿಲ್ಲ. ಹುಷಾರಿಲ್ಲವಂತೆ ಚಿಕ್ಕಿಗೆ. ಬಿ.ಪಿ., ಸಕ್ಕರೆ ಕಾಯಿಲೆ ಜಾಸ್ತಿಯಾಗಿದೆಯಂತೆ.

“ಅವಳು ಹಂಗೇ. ಕೊರಗು ಹಚ್ಕೊಂಬಿಟ್ಟಿದಾಳೆ. ಕಾಯಿಲೆ ಜಾಸ್ತಿಯಾಗ್ದೆ ಇರುತ್ತಾ?” ಕಾರಣವನ್ನೂ ತಾನೇ ಹೇಳಿದ್ದಳು ಅಮೃತಾ. ‘ಯಾವ ಕೊರಗು?’ ಎಂದು ಇವನು ಕೇಳಬೇಕಾಗಿರಲಿಲ್ಲ. ರಾತ್ರಿ ಊಟದ ಹೊತ್ತಿಗೆ ಬಾಯ್ಬಿಟ್ಟು ಬಂದ ಕಾರಣ ತಿಳಿಸಿದ್ದಳು ಅಮೃತಾ,

“ಮಗೂನ ಕರ್ಕೊಂಡ್ಹೋಗೋಕೆ ಬಂದಿದೀನಿ ಕಣೋ. ಮಾತು ಕೊಟ್ಟಿದ್ದಿ, ನೆನಪುಂಟಲ್ವಾ?”

ನುಂಗುತ್ತಿದ್ದ ಅನ್ನ ಗಂಟಲಲ್ಲಿ ಸಿಕ್ಕಿ, ನೆತ್ತಿ ಹತ್ತಿ, ನೀರು ಕುಡಿದು ಸುಧಾರಿಸಿಕೊಂಡು, “ಏನೇ